# ಹೊಸತು

## ಟಿಕ್ ಟ್ಯಾಕ್ ಎಲಕ್ಕಿ ಮಿಂಟ್




ಟಿಕ್ ಟ್ಯಾಕ್ ತನ್ನ ಮಿಂಟ್ ಸರಣಿಯಲ್ಲಿ ಏಲಕ್ಕಿ ಸ್ವಾದವನ್ನು ಪರಿಚಯಿಸಿದೆ. ದೇಸಿ ಮಿಂಟ್ ಎಂಬ ಹೆಸರಿನೊಂದಿಗೆ ಇದು ಊಟದ ಬಳಿಕ ಮೌತ್ ಫ್ರೆಶ್ನರ್ ಆಗಿ ಬಳಸಲು ಸೂಕ್ತವಾಗಿದೆ.

ಏಲಕ್ಕಿ ಆರೋಗ್ಯಕ್ಕೂ ಉತ್ತಮವಾಗಿದ್ದು, ಇದು ಬಾಯಿಯ ಸ್ವಚ್ಛತೆಗೂ ಸಹಕಾರಿ ಎಂದು ಟಿಕ್ ಟ್ಯಾಕ್ ಹೇಳಿದೆ.

5 ಮತ್ತು 10 ರೂಪಾಯಿಯ ಪ್ಯಾಕ್‌ಗಳಲ್ಲಿ ಲಭ್ಯ.

ಮಾಹಿತಿಗೆ : 9920034916

## ಬೋರೋ ಪ್ಲಸ್ ಲೋಷನ್




ಇಮಾಮಿ ಸಂಸ್ಥೆ ಇದೀಗ ಬೋರೋ ಪ್ಲಸ್ ಟೋಟಲ್ ಮಾಯಿಶ್ಚರೈಸಿಂಗ್ ಲೋಷನ್ ಹೊರತಂದಿದೆ.

ಇದು ಮಿಲ್ಕ್ ಕ್ರೀಮ್, ರೋಸ್ ಪೆಟಲ್ಸ್, ಬಾದಾಮಿ ಮತ್ತು ಕೇಸರಿಯಂತಹ ನೈಸರ್ಗಿಕ ಅಂಶಗಳಿಂದ ಕೂಡಿದೆ.

ಎಲ್ಲ ರೀತಿಯ ಚರ್ಮಕ್ಕೂ ಇದು ಸೂಕ್ತವಾಗಿದ್ದು, ಚರ್ಮದ ಒಣಗುವಿಕೆ, ತುರಿಕೆಯನ್ನು ಹೋಗಲಾಡಿಸಿ ಮೃದುತ್ವ ಮತ್ತು ಕಾಂತಿಯನ್ನು ತರುತ್ತದೆ.

100 ಎಮ್‌ಎಲ್ ಪ್ಯಾಕ್‌ನ ಬೆಲೆ 65 ರೂಪಾಯಿ.

ಮಾಹಿತಿಗೆ: 8971498865

## ಕಾಯ ಸ್ಕಿನ್ ಕೇರ್

ಚರ್ಮದ ಕುರಿತು ಕಾಳಜಿ ವಹಿಸುವವರಿಗಾಗಿ ಕಾಯ ಸ್ಕಿನ್ ಕೇರ್ ಪ್ಯಾಕ್ ಹೊರತಂದಿದೆ. ದಿನನಿತ್ಯದ ಬಳಕೆಗೆ ಇದು ಸೂಕ್ತವಾಗಿದ್ದು, ವಿಶೇಷವಾಗಿ ಸದಾ ಪ್ರಯಾಣ ಮಾಡುವವರಿಗಾಗಿಯೇ ರೂಪಿಸಲಾಗಿದೆ. ಧೂಳು ಮತ್ತು ಸೂರ್ಯನ ಕಿರಣಗಳಿಂದ ಚರ್ಮಕ್ಕೆ ಆಗುವ ಹಾನಿಯನ್ನು ಇದು ತಡೆಗಟ್ಟುತ್ತದೆ. ಚರ್ಮದ ಅಲರ್ಜಿ ಮತ್ತು ತ್ವಚೆಯ ತಾಜಾತನ ಕಾಪಾಡಿಕೊಳ್ಳಲೂ ಇದು ಸಹಕಾರಿ ಎಂದು ಕಾಯ ಹೇಳಿದೆ. ಬೆಲೆ 1890 ರೂಪಾಯಿಗಳಿಂದ ಆರಂಭ.




ಮಾಹಿತಿಗೆ : 098207726415

## ಸಫಲ್ ಆಲೂ ಟಿಕ್ಕಿ




ಸಿದ್ಧ ಆಹಾರ ಉತ್ಪನ್ನಗಳ ತಯಾರಕ ಸಂಸ್ಥೆ ಸಫಲ್ ಈಗ ಕರಿದ ಸಿದ್ಧ ಆಹಾರದ ರೂಪದಲ್ಲಿ ಆಲೂ ಟಿಕ್ಕಿ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಶೀಘ್ರದಲ್ಲಿ ತಯಾರಿಸಬಹುದಾದ ತಿನಿಸು ಇದಾಗಿದ್ದು, ಆರೋಗ್ಯಕ್ಕೂ ಉತ್ತಮ ಎಂದು ಸಫಲ್ ಹೇಳಿದೆ.

ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡಿರುವ ಸಫಲ್, ಉತ್ತಮ ಪ್ಯಾಕಿಂಗ್ ಹೊಂದಿದೆ.

400 ಗ್ರಾಂ ಪ್ಯಾಕ್ ಬೆಲೆ 75 ರೂಪಾಯಿ.

ಮಾಹಿತಿಗೆ : 9711306385

## ಹೆಟ್ಟಿಕ್ ಇನ್ನೊವೇಷನ್

ಗೃಹಬಳಕೆ ಮತ್ತು ಕಚೇರಿಗೆ ಸೂಕ್ತವಾದ ಪ್ರೀಮಿಯಂ ಫಿಟ್ಟಿಂಗ್ ಉತ್ಪನ್ನಗಳು, ಒಳಾಂಗಣ ವಿನ್ಯಾಸಕ್ಕೆ ಅಗತ್ಯವಾದ ಉಪಕರಣಗಳ ಸಂಗ್ರಹವನ್ನು ಹೆಟ್ಟಿಕ್ ಇನ್ನೋವೇಷನ್ ಪರಿಚಯಿಸಿದೆ. ಆಧುನಿಕ ಮಾದರಿಯ ಪೀಠೋಪಕರಣವನ್ನು ಇದು ಹೊಂದಿದೆ. ಆಯ್ಕೆಯ ವಿನ್ಯಾಸ ಮತ್ತು ಬಣ್ಣಗಳಲ್ಲಿ ಇದು ದೊರೆಯುತ್ತದೆ.



ವಿವರಗಳಿಗೆ : www.hettich.com

## ಮೋಟೊರೊಲ ಮೋಟೊ X

ಮೋಟೊರೊಲ ಸ್ಮಾರ್ಟ್‌ಫೋನ್ ಸರಣಿಯಲ್ಲಿ ಮೋಟೊ X ಸೆಕೆಂಡ್ ಜನರೇಷನ್ ಮಾರುಕಟ್ಟೆ ಪ್ರವೇಶಿಸಿದೆ. ಇದು 2 ಜಿಬಿ ರ‍್ಯಾಮ್, 16 ಜಿಬಿ ಮೆಮೊರಿ, 13 ಮೆಗಾಪಿಕ್ಸೆಲ್ ಕ್ಯಾಮೆರಾ ಮತ್ತು 2 ಮೆಗಾಪಿಕ್ಸೆಲ್ ಸೆಲ್ಫಿಯನ್ನು ಹೊಂದಿದೆ.



5.2 ಇಂಚಿನ ಸ್ಪರ್ಶ ಸಂವೇದಿ ತೆರೆ, ನ್ಯಾನೊ ಸಿಮ್, 2300 ಎಂಎಹೆಚ್ ಬ್ಯಾಟರಿ ಸಾಮರ್ಥ್ಯ, 4G ನೆಟ್‌ವರ್ಕ್ ಇದರ ವಿಶೇಷ.

ಬೆಲೆ 31,999 ರೂಪಾಯಿ.

ವಿವರಗಳಿಗೆ : www.motorola.in